

ದೇವರು ತನ್ನ ಭಕ್ತರನ್ನು ರಕ್ಷಿಸುತ್ತಾನೆ
ಕಥೆ: ಆರ್. ವಿ.
ಚಿತ್ರ: ಶಂಕರ್
ಪೂಂತಾನಂ ಎಂಬವನು ಗುರುವಾಯೂರಪ್ಪನ ಪರಮಭಕ್ತ. ‘ನಾರಾಯಣೀಯಂ’ ಗ್ರಂಥವನ್ನು ಬರೆದಿರುವ ಮೇಲ್ಪತ್ತೂರು ನಾರಾಯಣ ಭಟ್ಟತ್ತಿರಿಯೂ ಇವನೂ ಆತ್ಮೀಯ ಗೆಳೆಯರಾಗಿದ್ದರು. ಒಂದು ದಿನ ಭಟ್ಟತ್ತಿರಿ ತಾನು ಯಾವಾಗಲೂ ಧರಿಸಿರುತ್ತಿದ್ದ ಒಂದು ಚಿನ್ನದ ಉಂಗುರವನ್ನು ಪೂಂತಾನಂಗೆ ಉಡುಗೊರೆಯಾಗಿ ಕೊಟ್ಟ.
1
ಒಮ್ಮೆ ಪೂಂತಾನಂ ದೇವರ ದರ್ಶನಕ್ಕಾಗಿ ಗುರುವಾಯೂರಿಗೆ ಹೊರಟ. ರಸ್ತೆಯಲ್ಲಿ ಒಂದು ಕಾಡಿನ ಮಧ್ಯೆ ಹೋಗಬೇಕಾಗಿತ್ತು. ಒಂದು ದಿನ ....
ಗುರುವಾಯೂರಪ್ಪಾ ! ನಾರಾಯಣ! ಗೋವಿಂದ!
2
ಕಾಡಿನಲ್ಲಿ ದಾರಿಹೋಕರನ್ನು ಕೊಳ್ಳೆಹೊಡೆಯಲು ಮೂವರು ಕಳ್ಳರು ಅವಿತು ಕುಳಿತಿದ್ದರು.
3
ಹೇ! ಅಲ್ಲೇ ನಿಲ್ಲು!
ಗುರುವಾಯೂರಪ್ಪಾ!
ಇಲ್ಲಿ ಯಾರೂ ನಿನ್ನ ಸಹಾಯಕ್ಕೆ ಬರುವುದಿಲ್ಲ. ನಿನ್ನ ಬಳಿ ಇರುವುದನ್ನೆಲ್ಲಾ ಹೊರಗೆ ತೆಗೆ!
4
ಕಳ್ಳರು ಅವನ ಕೈಗಳನ್ನು ಕಟ್ಟಿ ಕೆಳಕ್ಕೆ ಉರುಳಿಸಿದರು.
ಇವನ ಜೇಬನ್ನೆಲ್ಲಾ ಹುಡುಕಿ. ಇರುವುದನ್ನೆಲ್ಲಾ ಕಿತ್ತುಕೊಳ್ಳಿ.
ಓ ದೇವರೇ ನನ್ನನ್ನು ಕಾಪಾಡು. ನಿನ್ನಲ್ಲಿ ಶರಣಾಗಿದ್ದೇನೆ.
5



ಹ! ಹ! ಹ! ಇಲ್ಲಿ ನಿನಗೆ ಯಾರು ಸಹಾಯ ಮಾಡುವರು? ನಿನ್ನಲ್ಲಿರುವುದನ್ನೆಲ್ಲಾ ತೆಗೆ. ಅಯ್ಯೋ, ಇವನ ಬಳಿ ಏನೂ ಇಲ್ಲ!
ದೂರದಲ್ಲಿ ಒಂದು ಬೆಳಕು ಕಾಣುತ್ತಿದೆ. ಯಾರೋ ಬರು-ವಂತಿದೆ. ಕುದುರೆಗಳ ಗೊರಸಿನ ಶಬ್ದ ಬೇರೆ ಕೇಳುತ್ತಿದೆ. ನಾವು ಓಡಿ ಹೋಗೋಣ.
6
ಗುರುವಾಯೂರಿನ ಮಂತ್ರಿ ತನ್ನ ಸೈನಿಕರೊಡನೆ ಬರುತ್ತಿದ್ದ.
ಅವರು ಪೂಂತಾನಂ ಅಲ್ಲವೆ? ತಕ್ಷಣ ಅವರ ಕಟ್ಟುಗಳನ್ನು ಬಿಚ್ಚಿ.
7
ಗುರುವಾಯೂರಪ್ಪನೇ ನಿನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಸಮಯಕ್ಕೆ ಸರಿಯಾಗಿ ಬಂದು ನನ್ನನ್ನು ಕಾಪಾಡಿದ ನಿನ್ನ ಋಣವನ್ನು ಹೇಗೆ ತೀರಿಸಲಿ?
ನಿಮ್ಮಿಂದ ನಾನು ಏನನ್ನಾದರೂ ಸ್ವೀಕರಿಸಲೇಬೇಕೆ? ಹಾಗಿದ್ದಲ್ಲಿ ನಿಮ್ಮ ಕೈ ಬೆರಳಲ್ಲಿರುವ ಉಂಗುರವನ್ನು ಕೊಡಿ.
8
ಮಂತ್ರಿಗೆ ಹೇಗೆ ಇಲ್ಲ ಎನ್ನಲಿ? ಆದರೆ ಭಟ್ಟತ್ತಿರಿ ಇದನ್ನು ನನಗೆ ತುಂಬ ಪ್ರೀತಿಯಿಂದ ಕೊಟ್ಟಿದ್ದಾನೆ. ಸರಿ, ಏನಾದರಾಗಲಿ ಕೊಟ್ಟು ಬಿಡೋಣ. ಗುರುವಾಯೂರಪ್ಪಾ, ನನ್ನನ್ನು ಮನ್ನಿಸು!
9
ಅಂದು ರಾತ್ರಿ ದೇವಸ್ಥಾನದ ಪೂಜಾರಿಯ ಕನಸಿನಲ್ಲಿ ದೇವರು ಕಾಣಿಸಿಕೊಂಡು ಹೇಳಿದ...
ನನ್ನ ಪಾದದ ಬಳಿ ಒಂದು ಉಂಗುರವಿದೆ. ಇದನ್ನು ಪೂಂತಾನಂ ನನಗೆ ಅರ್ಪಿಸಿದ್ದಾನೆ. ನೀನು ಅಲಂಕಾರಗಳನ್ನು ತೆಗೆಯುವಾಗ, ಅದು ನಿನಗೆ ಸಿಗುವುದು. ನಾಳೆ ಅವನು ದೇವಸ್ಥಾನಕ್ಕೆ ಬಂದಾಗ ಅವನಿಗೆ ಅದನ್ನುಕೊಡು.
10



ಮಾರನೆಯ ದಿನ ಬೆಳಗ್ಗೆ...
ಆಹಾ! ಉಂಗುರ ಇಲ್ಲದೆ. ದೇವರ ಆಜ್ಞೆಯ ಪ್ರಕಾರ ಇದನ್ನು ಪೂಂತಾನಂಗೆ ಕೊಡಬೇಕು.
11
ಈ ವಿಷಯ ಬಹಿರಂಗವಾದುದೇ ತಡ, ಗುಂಪು ಗುಂಪಾಗಿ ಜನ ದೇವಸ್ಥಾನದ ಮುಂದೆ ಸೇರಿದರು.
12
ಇದು ಯಾವುದನ್ನೂ ತಿಳಿಯದೆ, ಪೂಂತಾನಂ ಸ್ನಾನ ಮಾಡಿ ದೇವಸ್ಥಾನದತ್ತ ಬರುತ್ತಿದ್ದನು.
ಓಹೋ! ಪೂಂತಾನಂ ಬರುತ್ತಿದ್ದಾರೆ!
13
ಯಾಕೆ ಗುಂಪು ಸೇರಿದೆ?
ಪೂಜ್ಯರೇ, ನಿನ್ನೆ ನನ್ನ ಕನಸಿನಲ್ಲಿ ದೇವರು ನೀವು ಅವರಿಗೆ ಉಂಗುರವನ್ನು ಅರ್ಪಿಸಿದ ವಿಷಯವನ್ನು ತಿಳಿಸಿದನು. ಇದನ್ನು ನಿಮಗೇ ಕೊಡ ಬೇಕೆಂದು ಅವನು ಹೇಳಿದ.
14
ಪೂಂತಾನಂ ಆಶ್ಚರ್ಯಚಕಿತನಾಗಿ ನಿಂತುಬಿಟ್ಟ.
15
ಗುರುವಾಯೂರಪ್ಪಾ, ನಾನು ಉಂಗುರವನ್ನು ಮಂತ್ರಿಗೆ ಕೊಟ್ಟೆ. ಅಂದರೆ ಮಂತ್ರಿಯ ವೇಷದಲ್ಲಿ ಬಂದವನು ನೀನೇ! ನನ್ನನ್ನು ಕಾಪಾಡಲು ಇಷ್ಟು ಕರುಣೆ ತೋರಿದೆಯಾ! ಎಂತಹ ಕರುಣಾಮಯಿ ನೀನು! ನಿನ್ನ ಕೃಪೆ ಗೆ ಪಾತ್ರನಾದ ನಾನೇ ಧನ್ಯ.